## ಪ್ರಾರ್ಥನೆ

# ಶ್ರೀಕೃಷ್ಣಲಹರೀ ಸ್ತೋತ್ರಮ್ – ೧

**ಕದಾ ವೃಂದಾರಣ್ಯೇ ವಿಪುಲಯಮುನಾತೀರಪುಲಿನೇ**
**ಚರಂತಂ ಗೋವಿಂದಂ ಹಲಧರಸುದಾಮಾದಿಸಹಿತಮ್ ।**
**ಅಹೋ ಕೃಷ್ಣ ಸ್ವಾಮಿನ್ ಮಧುರಮುರಲೀಮೋಹನ ವಿಭೋ**
**ಪ್ರಸೀದೇತ್ಯಾಕ್ರೋಶನ್ ನಿಮಿಷಮಿವ ನೇಷ್ಯಾಮಿ ದಿವಸಾನ್ ॥ ೧ ॥**

ವಿಸ್ತಾರವಾದ ಯಮುನಾನದಿಯ ತೀರದ ಮರಳಿನಲ್ಲಿ ಬಲರಾಮ, ಸುದಾಮ ಮೊದಲಾದವರೊಡನೆ ಸಂಚರಿಸುತ್ತಿರುವ ಗೋವಿಂದನನ್ನು; ''ಮಧುರವಾದ ಮುರಳೀನಾದದಿಂದ ಎಲ್ಲರನ್ನೂ ಸೆಳೆದುಕೊಳ್ಳುವ ಮೋಹನ, ಕೃಷ್ಣ ಎನ್ನೊಡೆಯನೆ, ನನ್ನಲ್ಲಿ ಪ್ರಸನ್ನನಾಗು'' ಎಂದು ಕೂಗುತ್ತಾ ದಿವಸಗಳನ್ನು ನಿಮಿಷದಂತೆ ಎಂದು ನಾನು ಕಳೆಯುವೆನು!

**ಕದಾ ಕಾಳಿಂದೀಯೇ ಹರಿಚರಣಮುದ್ರಾಂಕಿತತಟೇ**
**ಸ್ಮರನ್ ಗೋಪೀನಾಥಂ ಕಮಲನಯನಂ ಸಸ್ಮಿತಮುಖಮ್ ।**
**ಅಹೋ ಕೃಷ್ಣಾನಂದಾಂಬುಜವದನ ಭಕ್ತೈಕಸುಲಭ**
**ಪ್ರಸೀದೇತ್ಯಾಕ್ರೋಶನ್ ನಿಮಿಷಮಿವ ನೇಷ್ಯಾಮಿ ದಿವಸಾನ್ ॥ ೨ ॥**

ಕೃಷ್ಣನ ಪಾದಗಳ ಮುದ್ರೆಯಿಂದ ಅಂಕಿತವಾಗಿರುವ, ಮುಗುಳ್ನಗೆಯಿಂದ ಕೂಡಿದ, ಕಮಲದಂತಹ ಕಣ್ಣುಗಳುಳ್ಳ, ಗೋಪಿಯರ ನಾಥನಾದ ಕೃಷ್ಣನನ್ನು ''ಕಮಲವದನ, ಭಕ್ತರಿಗೆ ಸುಲಭವಾಗಿ ದೊರಕುವವನೆ, ಕೃಷ್ಣಾನಂದ, ಪ್ರಸನ್ನನಾಗು'' ಎಂದು ಕೂಗುತ್ತಾ ದಿವಸಗಳನ್ನು ನಿಮಿಷಗಳಂತೆ ಎಂದು ಕಳೆಯುವೆನು !

**ಕದಾಚಿತ್ ಖೇಲಂತಂ ವ್ರಜಪರಿಸರೇ ಗೋಪತನಯೈಃ**
**ಕಥಂಚಿತ್ ಸಂಪ್ರಾಪ್ತಂ ಕಿಮಪಿ ಭಜತಂ ಕಂಜನಯನಮ್ ।**



**ಅಯೇ ರಾಧೇ ಕಿಲ ಹರಸಿ ರಸಿಕೇ ಕಂಚುಕಯುಗಂ**
**ಪ್ರಸೀದೇತ್ಯಾಕ್ರೋಶನ್ ನಿಮಿಷಮಿವ ನೇಷ್ಯಾಮಿ ದಿವಸಾನ್ ॥ ೩ ॥**

ಗೋಕುಲದ ಪರಿಸರದಲ್ಲಿ ಗೋಪಕುಮಾರರೊಡನೆ ಆಡುತ್ತಾ ಒಂದು ಬಾರಿ ಹೇಗೋ ಏನನ್ನೋ ಬೇಡುವವನಂತೆ ಬಂದ, ''ರಸಿಕಳೆ, ರಾಧೆ, ವಸ್ತ್ರಗಳನ್ನು ಸೆಳೆದುಕೊಳ್ಳುತ್ತಿರುವೆಯಲ್ಲ'' – ಎಂದು ಕೂಗುತ್ತಿರುವ ಕನ್ನೈದಿಲೆಯ ಕಣ್ಣಿನ ಕೃಷ್ಣನನ್ನು ''ನನ್ನಲ್ಲಿ ಪ್ರಸನ್ನನಾಗು'' ಎಂದು ಕೂಗುತ್ತಾ ದಿವಸಗಳನ್ನು ನಿಮಿಷಗಳಂತೆ ಎಂದು ಕಳೆಯುವೆ !

## ಸೂಕ್ತಿಪ್ರಭ

**ಅಪಿ ಚೇದಸಿ ಪಾಪೇಭ್ಯಃ ಸರ್ವೇಭ್ಯಃ ಪಾಪಕೃತ್ತಮಃ ।**
**ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ ॥**



ನೀನು ಎಲ್ಲಾ ಪಾಪಿಗಳಿಗಿಂತಲೂ ಹೆಚ್ಚು ಪಾಪವನ್ನು ಮಾಡಿದ್ದರೂ (ಸಮುದ್ರದ ಹಾಗೆ ಇರುವ) ಆ ಸಮಸ್ತ ಪಾಪವನ್ನೂ ಜ್ಞಾನವೆಂಬ ನಾವೆಯಿಂದಲೇ ದಾಟುವೆ. — ಶ್ರೀಕೃಷ್ಣ *(ಗೀತೆ, ೪.೩೬)*

ಈ ಪ್ರಪಂಚವನ್ನು ಬಿಡುವಾಗ ನೆನಪಿಸಿಕೊ : ನೀನು ಪಡೆದ ಯಾವುದೊಂದನ್ನೂ ನೀನು ತೆಗೆದುಕೊಂಡು ಹೋಗಲಾರೆ. ಆದರೆ ನೀನು ಕೊಟ್ಟದ್ದು ಏನಿದೆಯೋ ಅದನ್ನು ಮಾತ್ರ ತೆಗೆದುಕೊಂಡು ಹೋಗುವೆ – ಪ್ರಾಮಾಣಿಕ ಸೇವೆ, ಪ್ರೀತಿ, ತ್ಯಾಗ, ಧೈರ್ಯಗಳಿಂದ ಶ್ರೀಮಂತವಾದ ತುಂಬು ಹೃದಯವನ್ನು ಮಾತ್ರ. — ಅಸಿಸ್ಸಿಯ ಸಂತ ಫ್ರಾನ್ಸಿಸ್



ದ್ವೇಷಿಸುವುದು ಸುಲಭ; ಪ್ರೀತಿಸುವುದು ಕಷ್ಟ. ಎಲ್ಲವೂ ಕೆಲಸ ಮಾಡುವ ರೀತಿ ಇದು. ಉತ್ತಮ ವಸ್ತುಗಳನ್ನು ಗಳಿಸುವುದು ಅತಿ ಕಠಿಣ; ಕೆಟ್ಟ ವಸ್ತುಗಳನ್ನು ಗಳಿಸುವುದು ಅತ್ಯಂತ ಸುಲಭ. — ಕನ್‌ಫ್ಯೂಶಿಯಸ್

